# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಗಾಳಿ ಆಂಜನೇಯ ಸ್ವಾಮಿ ವಾರ್ಡ್ ಸಂಖ್ಯೆ-157, ಶ್ರೀ ಬಾಲಗಂಗಾಧರನಾಥ ಸ್ವಾಮಿಜಿ ಉದ್ಯಾನವನ, ಟೆಲಿಕಾಂ ಲೇಔಟ್, ಬ್ಯಾಟರಾಯನಪುರ, ಬೆಂಗಳೂರು-560 026

---

ಸಂಖ್ಯೆ: ಸ.ಕಾ.ನಿ.ಅ/ಗಾಆ/ಪಿಆರ್/201/22-23

ದಿನಾಂಕ:-05-07-2022

ವಾರ್ಡ್ ಸಂಖ್ಯೆ : 157 ವಾರ್ಡ್ ಸಭೆಯ ನಡವಳಿ

**ಸಭೆಗೆ ಹಾಜರಾಗಿ ಭಾಗವಹಿಸಿದ ಸದಸ್ಯರು ಮತ್ತು ಸಾರ್ವಜನಿಕರ ವಿವರ:**

| ಕ್ರಮ ಸಂಖ್ಯೆ | ಅಧಿಕಾರಿಗಳು ಮತ್ತು ಸದಸ್ಯರುಗಳ ಹೆಸರು | ಪದನಾಮ/ಅಧ್ಯಕ್ಷರು | ಹಾಜರಾತಿ |
|---|---|---|---|
| 1 | ಶ್ರೀ ಮಂಗಲ್ ದಾಸ್ | ನೋಡೆಲ್ ಅಧಿಕಾರಿ | ಹಾಜರಾಗಿರುತ್ತಾರೆ |
| 2 | ಶ್ರೀ. ರಘುನಾಥ್ .ಕೆ.ಎನ್. | ಕಾರ್ಯದರ್ಶಿ | ಹಾಜರಾಗಿರುತ್ತಾರೆ |
| 3 | ಶ್ರೀ. ಜನಾರ್ಧನ್ | ಕಂದಾಯ ಅಧಿಕಾರಿ | ಹಾಜರಾಗಿರುತ್ತಾರೆ |
| 4 | ಶ್ರೀ. ಮಂಜುನಾಥ್ | ಬಿ.ಡಬ್ಲ್ಯೂ.ಎಸ್.ಎಸ್.ಬಿ. | ಹಾಜರಾಗಿರುತ್ತಾರೆ |
| 5 | ಶ್ರೀಮತಿ. ಸುಮಿತ್ರ | ಕಿ.ಅ. ಬೆಸ್ಕಾಂ | ಹಾಜರಾಗಿರುತ್ತಾರೆ |
| 6 | ಶ್ರೀ. ಬೆಟ್ಟಸ್ವಾಮಿ | ಸ್ಯಾಧಪೇದಾರ್ | ಹಾಜರಾಗಿರುತ್ತಾರೆ |
| 7 | ಶ್ರೀ. ಮಂಜುನಾಥ್ | ಸದಸ್ಯರು | ಹಾಜರಾಗಿರುತ್ತಾರೆ |
| 8 | ಭಾನುಶ್ರೀ | ಕಿ.ಅ (ಗುತ್ತಿಗೆ ಆದಾರದ ಮೇಲೆ) | ಹಾಜರಾಗಿರುತ್ತಾರೆ |
| 9 | ಶ್ರೀ. ಉಮೇಶ್ | ಕಿ.ಅ. ಬೆಸ್ಕಾಂ | ಹಾಜರಾಗಿರುತ್ತಾರೆ |
| 10 | ಶ್ರೀ. ಮುನಿರಾಜು | ಕಿ,ಆ.ಪರಿವೀಕ್ಷಕರು | ಹಾಜರಾಗಿರುತ್ತಾರೆ |

**<u>ಸಭೆಗೆ ಹಾಜರಿದ್ದ ಸಾರ್ವಜನಿಕರು</u>**

1. ಶ್ರೀ. ಪ್ರಸಾದ್
2. ಶ್ರೀ. ಮಧುಸೂದನ್
3. ಶ್ರೀ. ಗಿರೀಶ್
4. ಶ್ರೀ. ಸುಹಾಸ್
5. ಶ್ರೀ. ವೆಂಕಟೇಶ್
6. ಶ್ರೀಮತಿ. ಚಂದ್ರಕಲಾ
7. ಶ್ರೀಮತಿ. ಗೌರಮ್ಮ
8. ಶ್ರೀಮತಿ. ಗಿರಿಜ
9. ಶ್ರೀಮತಿ. ದೇವಕಿ
10. ಶ್ರೀಮತಿ. ವಿಜಯ
11. ಶ್ರೀಮತಿ. ರೇಖಾ

ದಿನಾಂಕ:-05-07-2022 ರಂದು ಮಾನ್ಯ ನೋಡಲ್ ಅಧಿಕಾರಿಗಳು ವಾರ್ಡ್ ಸಂಖ್ಯೆ : 157 ಗಾಳಿ ಆಂಜನೇಯ ಸ್ವಾಮಿ ದೇವಸ್ಥಾನ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರು ಹಾಗೂ ಶ್ರೀ. ರಘುನಾಥ್ .ಕೆ.ಎನ್. ಕಾರ್ಯದರ್ಶಿ ರವರು ಹಾಜರಿದ್ದ ಎಲ್ಲಾ ಅಧಿಕಾರಿಗಳು, ಸಿಬ್ಬಂದಿ ವರ್ಗದವರು ಮತ್ತು ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರುಗಳಿಗೆ ಸ್ವಾಗತವನ್ನು ಕೋರುತ್ತಾ ಸಭೆಯನ್ನು ಪ್ರಾರಂಭಿಸಲಾಯಿತು.

ಈ ಹಿಂದಿನ ಸಭೆಯಲ್ಲಿ ಬಂದಿದ್ದ ದೂರುಗಳ ಮೇಲೆ ಕೈಗೊಂಡಿರುವ ಕ್ರಮಗಳ ಬಗ್ಗೆ ಚರ್ಚಿಸುತ್ತ ಪ್ರಸ್ತುತ ಕುಂದು ಕೊರತೆಗಳ ಬಗ್ಗೆ ಚರ್ಚೆ ಪ್ರಾರಂಭಿಸಲಾಯಿತು.

| ಕ್ರ.ಸಂ | ವಿಷಯ | ತೀರ್ಮಾನ |
|---|---|---|
| 1 | ಲೈಟ್ ಕಂಬಗಳನ್ನು ಎಲ್ಲೆಂದರಲ್ಲಿ ಬಿಸಾಡಿರುವುದಾಗಿ ಶ್ರೀ.ಮಂಜುನಾಥ್ ರವರು ಕೋರಿದರು. | ಕ್ರಮ : ಈ ವಿಚಾರವಾಗಿ ಬೆಸ್ಕಾಂ ಇಲಾಖೆಗೆ ನೋಟೀಸ್ ನೀಡುವುದಾಗಿ ತಿಳಿಸಲಾಗಿದೆ. |
| 2 | ಸಂಜಯನಗರ ಸ್ಲಂಗೆ ಶುದ್ಧ ಕುಡಿಯುವ ನೀರನ್ನು ನೀಡುವಂತೆ ಶ್ರೀ.ಮಂಜುನಾಥ್ ರವರು ಕೋರಿದರು. | ಕ್ರಮ : ಈ ವಿಚಾರವಾಗಿ ಬಿ.ಡಬ್ಲ್ಯೂ.ಎಸ್.ಎಸ್.ಬಿ. ಇಲಾಖೆಗೆ ನೋಟೀಸ್ ನೀಡುವುದಾಗಿ ತಿಳಿಸಲಾಗಿದೆ. |
| 3 | 58 ಬಸ್ಸ್ ಸ್ಟಾಪ್ ಹತ್ತಿರ, ಕಸ್ತೂರಿಬಾ ನಗರ 8ನೇ ಅಡ್ಡರಸ್ತೆ ಮತ್ತು ಬಂಡೆ ಆಂಜನೇಯ ಸ್ವಾಮಿ ರಸ್ತೆ ಗಳಲ್ಲಿ ಫುಟ್‌ಪಾತ್‌ನಲ್ಲಿ ಡೆಬ್ರಿಸ್ ತುಂಬಿದ್ದು ಅದನ್ನು ತೆರವುಗೊಳಿಸುವಂತೆ ಶ್ರೀ.ಮಂಜುನಾಥ್ ರವರು ತಿಳಿಸಿದರು. | ಕ್ರಮ : ಈ ವಿಚಾರವಾಗಿ ಕ್ರಮವನ್ನು ಕೈಗೊಳ್ಳುವಂತೆ ನೋಡೆಲ್ ಅಧಿಕಾರಿರವರು ಸಹಾಯಕ ಅಭಿಯಂತರವರಿಗೆ ತಿಳಿಸಿದರು. |
| 4 | ಸೊಳ್ಳೆ ಹೆಚ್ಚಾಗಿರುವುದರಿಂದರಿಂದ ಸೊಳ್ಳೆ ಔಷಧಿಯನ್ನು ಸಿಂಪಡಿಸುವಂತೆ ಶ್ರೀ.ರಾಮಕೃಷ್ಣ ರವರು ತಿಳಿಸಿದರು | ಕ್ರಮ : ಈ ವಿಚಾರವಾಗಿ ಕ್ರಮವನ್ನು ಕೈಗೊಳ್ಳುವಂತೆ ನೋಡೆಲ್ ಅಧಿಕಾರಿರವರು ಸಭೆಯಲ್ಲಿ ಹಾಜರಿದ್ದ ಆರೋಗ್ಯ ಇಲಾಖೆಯ ಸಿಬ್ಬಂದಿಗಳಿಗೆ ತಿಳಿಸಿದರು. |
| 5 | ಆರ್.ಕೆ. ಪಬ್ಲಿಕ್ ಸ್ಕೂಲ್ ರಸ್ತೆ ಮತ್ತು ಎಂ.ಸಿ.ಟಿ. ಸ್ಲಂನಲ್ಲಿ ಮಳೆ ಬಂದಾಗ ಮೋರಿಗಳಲ್ಲಿ ನೀರು ತುಂಬಿ ರಸ್ತೆಯಲ್ಲಿ ಹರಿಯುತ್ತಿರುವುದಾಗಿ ಶ್ರೀ.ಮಂಜುನಾಥ್ ರವರು ತಿಳಿಸಿದರು | ಕ್ರಮ : ಈ ವಿಚಾರವಾಗಿ ಕೂಡಲೇ ಕ್ರಮವನ್ನು ಕೈಗೊಳ್ಳುವಂತೆ ನೋಡೆಲ್ ಅಧಿಕಾರಿರವರು ಸಹಾಯಕ ಅಭಿಯಂತರವರಿಗೆ ತಿಳಿಸಿದರು. |
| 6 | ಸ್ಯಾಟ್‌ಲೈಟ್ ಬಸ್ಸ್ ಸ್ಟಾಪ್ ಬಳಿ ಇರುವ ದೊಡ್ಡ ಮೋರಿಯ ಸುತ್ತಾ ತಂತಿಗಳು ಮತ್ತು ಕಲ್ಲುಗಳು ಹಾಳಗಿರುವುದಾಗಿ ಶ್ರೀ.ಮಂಜುನಾಥ್ ರವರು ತಿಳಿಸಿದರು | ಕ್ರಮ : ಈ ವಿಚಾರವಾಗಿ ಕೂಡಲೇ ಕ್ರಮವನ್ನು ಕೈಗೊಳ್ಳುವಂತೆ ನೋಡೆಲ್ ಅಧಿಕಾರಿರವರು ಸಹಾಯಕ ಅಭಿಯಂತರವರಿಗೆ ತಿಳಿಸಿದರು. |

ಸಭೆಯನ್ನು ಕಾರ್ಯದರ್ಶಿಗಳಾದ ಶ್ರೀ. ರಘುನಾಥ್ .ಕೆ.ಎನ್. ರವರು ವಂದನಾರ್ಪಣೆಯೊಂದಿಗೆ ಮುಕ್ತಾಯ ಮಾಡಿದರು.

ಕಾರ್ಯದರ್ಶಿ
ವಾರ್ಡ್ ಸಂಖ್ಯೆ : 157 (ಗಾಳಿ ಆಂಜನೇಯ ಸ್ವಾಮಿ)

**ಪ್ರತಿಯನ್ನು:-**

1. ಮಾನ್ಯ ಆಯುಕ್ತರ ಆಪ್ತ ಸಹಾಯಕರಿಗೆ ಕಳುಹಿಸುತ್ತಾ ಮಾನ್ಯ ಆಯುಕ್ತರ ಗಮನಕ್ಕೆ ತರುವಂತೆ ಕೋರಿದೆ.
2. ವಿಶೇಷ ಆಯುಕ್ತರು ಆಡಳಿತ ರವರ ಅವಗಾಹನೆಗೆ ಸಲ್ಲಿಸಿದೆ.
3. ಜಂಟಿ ಆಯುಕ್ತರು (ದಕ್ಷಿಣ) ರವರ ಅವಗಾಹನೆಗೆ ಸಲ್ಲಿಸಿದೆ.
4. ಅಧ್ಯಕ್ಷರು ಹಾಗೂ ನೋಡೆಲ್ ಅಧಿಕಾರಿಗಳು ರವರ ಅವಗಾಹನೆಗೆ ಸಲ್ಲಿಸಿದೆ.